# ‘ಪರಸಂಗ’ದ ತಿಮ್ಮನ ಹೊಸ ಕಥೆ!



‘ರಾಗ’ ಸಿನಿಮಾದ ಖ್ಯಾತಿಯ ಮಿತ್ರ ಅವರ ನಟನೆಯ ಹೊಸ ಚಿತ್ರ ‘ಪರಸಂಗ’. ಈ ಚಿತ್ರದಲ್ಲಿ ಕೂಡ ಅವರು ಮುಖ್ಯಪಾತ್ರದಲ್ಲಿ ಅಭಿನಯಿಸಿದ್ದಾರೆ.

ಲೋಕೇಶ್ ಅಭಿನಯದ ‘ಪರಸಂಗದ ಗೆಂಡೆತಿಮ್ಮ’ ಕನ್ನಡದ ಜನಪ್ರಿಯ ಚಿತ್ರಗಳಲ್ಲೊಂದು. ಆ ಸಿನಿಮಾವನ್ನು ನೆನಪಿಸುವಂತಿರುವ ಶೀರ್ಷಿಕೆಯನ್ನು ಹೊಂದಿರುವ ಮಿತ್ರರ ಸಿನಿಮಾ, ಈ ಕಾಲದ ತಿಮ್ಮನ ಕಥೆಯನ್ನು ಒಳಗೊಂಡಿದೆ. ಆ ಕಾರಣದಿಂದ ಶೀರ್ಷಿಕೆಗೆ ‘ತಿಮ್ಮನ ಕಥೆ’ ಎಂಬ ಅಡಿಬರಹವಿದೆ. ಹಳೆಯ ಚಿತ್ರಕ್ಕೂ ಈ ಚಿತ್ರಕ್ಕೂ ಯಾವುದೇ ಸಂಬಂಧವಿಲ್ಲವಂತೆ. ಇರುವ ಏಕಮಾತ್ರ ಸಾಮ್ಯತೆಯಂತೆ ಈ ತಿಮ್ಮನ ಕಥೆ ನಡೆಯುವುದು ಕೂಡ ಗ್ರಾಮೀಣ ಪರಿಸರದಲ್ಲೇ.

ರಘು ‘ಪರಸಂಗ’ದ ನಿರ್ದೇಶಕರು. ‘ತರ್ಲೆ ವಿಲೇಜ್’ ಎನ್ನುವ ಕಾಮಿಡಿ ಚಿತ್ರವನ್ನು ನಿರ್ದೇಶಿಸಿದ್ದ ಅವರು, ಇದೀಗ ಗ್ರಾಮೀಣ ಪರಿಸರದಲ್ಲಿ ನಡೆಯುವ ಮೋಹಕ ಪ್ರೇಮಕಥೆಯೊಂದನ್ನು ನಿರೂಪಿಸಿದ್ದಾರಂತೆ. ಪ್ರೇಮದೊಂದಿಗೆ ಹಾಸ್ಯವೂ ಭಾವುಕತೆಯೂ ಸಂದೇಶವೂ ಇರುವ ಸಿನಿಮಾವನ್ನು ಮನೆಮಂದಿಯೊಂದಿಗೆ ಕೂತು ನೋಡಬಹುದು ಎನ್ನುವುದು ಚಿತ್ರತಂಡ ನೀಡುವ ಭರವಸೆ.

ಅಕ್ಷತಾ ಶ್ರೀನಿವಾಸ್ ಚಿತ್ರದ ನಾಯಕಿ. ಈ ಮುನ್ನ ತೆಲುಗು ಮತ್ತು ಹಿಂದಿ ಚಿತ್ರಗಳಲ್ಲಿ ನಟಿಸಿರುವ ಅಕ್ಷತಾ, ‘ಪರಸಂಗ’ದ ಮೂಲಕ ಗಾಂಧಿನಗರಕ್ಕೆ ಬಂದಿದ್ದಾರೆ. ಹರ್ಷವರ್ಧನ್ ರಾಜ್ ಸಂಗೀತ ಹಾಗೂ ಸುಜಯ್‌ಕುಮಾರ್ ಛಾಯಾಗ್ರಹಣ ಚಿತ್ರಕ್ಕಿದೆ. ಮನೋಜ್ ಪುತ್ತೂರ್, ಚಂದ್ರಪ್ರಭಾ, ಗೋವಿಂದೇಗೌಡ, ಡೈಮಂಡ್ ರಾಜಣ್ಣ ಹಾಗೂ ಸಂಜು ಬಸಯ್ಯ ತಾರಾಗಣದಲ್ಲಿರುವ ಪ್ರಮುಖರು. ಇದೇ ವರ್ಷದಲ್ಲಿ ‘ಪರಸಂಗ’ವನ್ನು ತೆರೆ ಕಾಣಿಸುವ ಉತ್ಸಾಹದಲ್ಲಿ ಚಿತ್ರತಂಡವಿದೆ.



# ಬೆಟ್ಟಿಂಗ್ ಮಾಫಿಯಾದ ಬೆನ್ನೇರಿ...

‘ಈ ಪಟ್ಟಣಕ್ಕೆ ಏನಾಗಿದೆ...’ ರವಿ ಸುಬ್ಬರಾವ್ ನಿರ್ದೇಶನದ ಸಿನಿಮಾ. ವಿಭಿನ್ನ ಶೀರ್ಷಿಕೆಯ ಈ ಚಿತ್ರದ ಕಥೆಯೂ ಭಿನ್ನವಾಗಿದೆಯಂತೆ. ಕ್ರಿಕೆಟ್ ಬೆಟ್ಟಿಂಗ್ ಚಿತ್ರ ಕಥನದ ಹೂರಣ.

ಕ್ರಿಕೆಟ್ ಬೆಟ್ಟಿಂಗ್‌ನ ವಿವಿಧ ಆಯಾಮಗಳನ್ನು ತಮ್ಮ ಚಿತ್ರದಲ್ಲಿ ಕಾಣಿಸಲು ರವಿ ಪ್ರಯತ್ನಿಸಿದ್ದಾರಂತೆ. ಕಿರಿಯರಿಂದ ಹಿರಿಯರವರೆಗೆ ಆವರಿಸಿಕೊಂಡಿರುವ ಈ ಬೆಟ್ಟಿಂಗ್ ದಂಧೆಯನ್ನು ನಡೆಸುತ್ತಿರುವವರು ಯಾರು? ಇದರ ಅಸಲಿ ಕಥೆ ಏನು? ಅಮಾಯಕರನ್ನು ಈ ದಂಧೆ ಹೇಗೆ ಬಲಿ ತೆಗೆದುಕೊಳ್ಳುತ್ತಿದೆ? ಪೊಲೀಸ್ ಇಲಾಖೆಗೆ ಬೆಟ್ಟಿಂಗ್ ನಿಯಂತ್ರಿಸಲು ಯಾಕೆ ಸಾಧ್ಯವಾಗುತ್ತಿಲ್ಲ? – ಇವೆಲ್ಲ ಪ್ರಶ್ನೆಗಳಿಗೆ ‘ಈ ಪಟ್ಟಣಕ್ಕೆ ಏನಾಗಿದೆ...’ ಚಿತ್ರದಲ್ಲಿ ಉತ್ತರವಿದೆಯಂತೆ.

ಮೂವರು ಯುವಕರು ಹಾಗೂ ಇಬ್ಬರು ತರುಣಿಯರ ಸುತ್ತ ಸಿನಿಮಾ ಸುತ್ತುತ್ತದೆ. ಕುತೂಹಲಕರ ಕಥೆಯಲ್ಲಿ ಕಾಮಿಡಿಯ ಅಂಶವೂ ಸಾಕಷ್ಟಿದೆಯಂತೆ. ರಂಗಭೂಮಿ ಮತ್ತು ಮಾಡೆಲಿಂಗ್‌ನಲ್ಲಿ ಅನುಭವವುಳ್ಳವರನ್ನು ಚಿತ್ರದ ತಾರಾಗಣದಲ್ಲಿದ್ದಾರೆ. ನಿರ್ದೇಶಕ ರವಿ ಅವರೇ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ರಾಧಿಕಾ ರಾಮ್, ಸಂಧ್ಯಾ, ದಿಶಾ ಕೃಷ್ಣಯ್ಯ ಹಾಗೂ ಶ್ರೀನಿಧಿ ತಾರಾಗಣದಲ್ಲಿರುವ ಕೆಲವರು.

ಪ್ರಸ್ತುತ ಗೋವಾ ಅಂತರರಾಷ್ಟ್ರೀಯ ಚಿತ್ರೋತ್ಸವದ ‘ಫಿಲ್ಮ್ ಬಜಾರ್’ಗೆ ಆಯ್ಕೆಯಾಗುವ ಮೂಲಕ ‘ಈ ಪಟ್ಟಣಕ್ಕೆ ಏನಾಗಿದೆ...’ ಸಿನಿಮಾ ಸುದ್ದಿಯಲ್ಲಿದೆ.